ನವೆಂಬರ್ 2014

# ಕಾನನ

ನಿಸರ್ಗದೆಡೆಗೆ ಪಯಣ



BANNERUGHATTA

WILDLIFE
CONSERVATION
GROUP

# ಕಾನನ
ನಿಸರ್ಗದೆಡೆಗೆ ಪಯಣ



ವನ್ಯ ವಿಜ್ಞಾನ 2.0
ಹಂದಿ ಬೇಟೆ
ರಂಗು (ಕವನ)
ವಿವಿ ಅಂಕಣ

"ಬಣ್ಣದ ಗರಿಯಿದು, ಅಂದದ ಗರಿಯಿದು ನೋಡಕ್ಕ
ಕಾಡಿನ ಅಂಚಿನ ಬೇಲಿಯ ಬುಡದಲಿ ದೊರಕಿತು ಈ ಗರಿ ನನಗಕ್ಕ."

# ವನ್ಯವಿಜ್ಞಾನ 2.0



ಇ-ವಿಳಾಸ
kaanana.mag@gmail.com
www.issuu.com/kaanana

ಮುಖಪುಟ
ಚಿಟ್ಟೆಯ ಲಾರ್ವ

BANNERUGHATTA WILDLIFE CONSERVATION GROUP



# ವನ್ಯ ವಿಜ್ಞಾನ 2.0

'ನಾಗರೀಕತೆ' ಎಂಬ ಹೆಸರನ್ನು ಹಿಡಿದು ಮಾನವ, ಹಣದ ಹಿಂದೆ ಬಿದ್ದು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಉಳಿದ ಜೀವಿಗಳನ್ನು ನಿರ್ಲಕ್ಷಿಸುತ್ತಿದ್ದಾನೆ. ಹೀಗೆ ನಾವು ಮುಂದುವರಿದರೆ ಮುಂದೊಂದು ದಿನ ನಮಗೆ ಕುಡಿಯಲೂ ಸಹ ಶುದ್ಧ ನೀರು, ಗಾಳಿ ಇಲ್ಲದಂತಾಗುತ್ತದೆ. ಅದಕ್ಕಾಗಿಯೆ ನಾವು ನಮ್ಮ ಪರಿಸರವನ್ನು, ಉಳಿದ ಜೀವಿಗಳನ್ನು ಗೌರವಿಸಿ, ರಕ್ಷಿಸಬೇಕು. ಈ ಉದ್ದೇಶದಿಂದ ಜನರಲ್ಲಿ ಅದರಲ್ಲೂ ಶಾಲಾ ಮಕ್ಕಳಲ್ಲಿ ಅರಿವು ಮೂಡಿಸುವ ಸಲುವಾಗಿ WCG ಯು ಸರಗೂರಿನ ಶಾಲೆಯಲ್ಲಿ ಛಾಯಾಚಿತ್ರ ಪ್ರದರ್ಶನವನ್ನು ಕಳೆದ  ನವಂಬರ್ 14 ರಿಂದ 16 ರವರಿಗೆ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಕೆಲವು ಕ್ಷಣಗಳು.






Lions Club Of Santhe Sargur
Club no:050491 Dist 317A
ವನ್ಯ ವಿಜ್ಞಾನ


Lions Club Of Santhe Sargur
Club no:050491 Dist 317A
ವನ್ಯ ವಿಜ್ಞಾನ


DO NOT TOUCH




DO NOT TOUCH













# ಹಂದಿ ಬೇಟೆ

ನರಮಾನವರಾದ ನಾವು ಕಾಡು ಮೃಗಗಳನ್ನು ಪಳಗಿಸಿ ಸಾಕುವುದನ್ನು ಕಲಿಯುವುದಕ್ಕೆ ಮುಂದೆಯಿಂದಲೂ ಅವುಗಳನ್ನು ಬೇಟೆಯಾಡಿ ಕೊಂದು ತಿನ್ನುತ್ತಾ ಬಂದಿದ್ದೇವೆ. ನಾನು ಚಿಕ್ಕ ವಯಸ್ಸಿನವ ಆಗಿದ್ದಾಗಿನಿಂದಲೂ ತಲೆಯಲ್ಲಿ ಉಳಿದಿರುವ ಬೇಟೆಯ ಚಿತ್ರವೆಂದರೆ, ಕಾಡುಹಂದಿಯದು !.

ಸೊಂಪಾಗಿ ಮಳೆಯಾಗಿ ತಂಪಾದ ವಾತಾವರಣದಲ್ಲಿ ಕಣ್ಣು ಹಾಯಿಸಿದವು ಹಸಿರು ಕಂಗೊಳಿಸುವ ಹೊಲದಲ್ಲಿ ರಾಗಿಯ ತೆನೆ ಇನ್ನೂ ಕಾಚಕ್ಕಿಯಾಗಿದ್ದ ಕಾಲದಲ್ಲಿ , ಕಾಡಿನಿಂದ ಊರಿನ ಕಡೆಗೆ ಬರುತ್ತಿದ್ದ ಕಾಡುಹಂದಿಗಳನ್ನು ಬೇಟೆಯಾಡುವ, ತಿನ್ನುವ, ತೆವಲಿನ ಜನ ಬಹಳವಾಗಿತ್ತು. ಈಗಲೂ ಅಲ್ಲಲ್ಲಿ ಇದ್ದಾರೆ.

ಹಗಲಿನಲ್ಲಿ ಸಭ್ಯರಂತೆ, ಮಾಮೂಲಿ ಮನುಷ್ಯರಂತೆ ಕಂಡರೂ, ಅವರ ಸ್ಮೃತಿಪಟಲದಲ್ಲಿ ಅಡಗಿದ್ದ ಬೇಟೆಯ ಸೆಳೆತ ರಾತ್ರಿಯ ವೇಳೆ ಅರಳಿಕೊಂಡು ಕಾಡು ಮೃಗಗಳನ್ನು ಬೇಟೆಯಾಡಿ, ತಾವೇ ಸೃಷ್ಟಿಸಿಕೊಂಡ ಸಮಾಜಕ್ಕೆ , ಎಲ್ಲೆಲ್ಲಿ ಯಾರ್ಯಾರಿಂದ ತೊಂದರೆ ಬರಬಹುದೋ , ಆ ಜನಗಳಿಗೆಲ್ಲಾ ಹಂಚಿಯಾದ ಮೇಲೆ ಬೇಟೆಗಾರನಿಗೆ ಮಿಕ್ಕುತ್ತಿದ್ದದ್ದು ಕೇವಲ ಮಿಗದ ತಲೆ ಮತ್ತು ಒಂದು ತೊಡೆ ಮಾಂಸಾ ಮಾತ್ರ. 'ಇವರು ಬೇಟೆಯಾಡಿದರೆ ಅವನಿಗೆ, ಅವನು ಬೇಟೆಯಾಡಿದರೆ ಇವನಿಗೆ' ಎಂಬ ಹಂಚಿ ತಿನ್ನುವ ಒಳ್ಳೆಯ ಗುಣಗಳೂ ಈ ಬೇಟೆಯ ಕಾರ್ಯದಲ್ಲೂ ಜೀವಂತವಾಗಿದ್ದಿತು.

ಬೇಟೆಯಾಡುವ ವಿಧಾನಗಳು ಬಹಳ ವೈವಿಧ್ಯಮಯ. ಇತ್ತೀಚೆಗಂತೂ ಆಧುನಿಕರಣದ ಕಾರಣಗಳಿಗಿ ಬಹು ಬಲಶಾಲಿಯಾಗಿ ಬೇಟೆಯಾಡಬಲ್ಲರು. ನಾಡ ಬಂದೂಕು, ಕ್ಲಾಚ್ ವೈರಿನ ಹುರುಳು, ಡೈನಾಮೇಟ್ ತುಂಬಿದ ಮಾಂಸದುಂಡೆ ಹೀಗೆ ಹಲವು ತರಹ. ಫೋನಲ್ಲೇ ವ್ಯವಹಾರ ಕುದುರಿಸಿ ಸಪ್ಲೆ ಕೊಡೋ ವ್ಯವಸ್ಥೆ ಕೂಡ ಬೆಳೆಯುತ್ತಿದೆ. ನಗರದ ಜನ ಕಾಡು ಮಾಂಸಕ್ಕೆ ಸಾವಿರ ಕೊಡಲೂ ತಯಾರು ! ಮಾರುಕಟ್ಟೆಯೂ ಜೋರು . ಸರಿಯಾಗಿ ಉಪ್ಪುಕಾರ ಹಾಕಿ, ಬೇಯಿಸಿ ಹುರಿದು , ಮಸಾಲೆಗಳನ್ನು ಹದವಾಗಿ ಬೆರೆಸಿ ಮಾಡಿದ ಮಾಂಸದ ಪಲ್ಯವನ್ನು ತಿಂದವರಿಗೆ ಮಾತ್ರ ಗೊತ್ತಿರುತ್ತದೆ ಅದರ ರುಚಿ.

ಯಾವುದೋ ಕಳ್ಳಬೇಟೆಗಾರನ ಗುಂಡು ತಿಂದು ಬಂದ ಕಾಡು ಹಂದಿಯೊಂದು ನಮ್ಮ ತೋಟಕ್ಕೆ ಬಂದು ಸತ್ತೋಗಿತ್ತು . ಹೀಗೆ ಸಾಯಿಸಿ ತಿನ್ನುವ ಮನಸ್ಸಿಗೆ ಮಾಂಸದ ಮೇಲೆ ಚಪಲವೇ ಹೊರತು ಜೀವದ ಮೇಲೆ ಕರುಣೆ ರವಷ್ಟೂ ಇರಲ್ಲಾ. ನಮ್ಮ ನಾಯಿ ಭಗೀರ ಈ ಸತ್ತ ಹಂದಿಯನ್ನು ನಮಗೆ ತೋರಿಸದ್ದಿದ್ದರೆ ಈ ಸತ್ತ ಹಂದಿಯ ಕಳೇಬರವನ್ನು ಒತ್ತೊಯ್ಯುವವರ ಸುಳಿವು ಸಹ ನಮಗೆ ಸಿಕ್ಕುತ್ತಿರಲಿಲ್ಲಾ .!

ಗನ್ನೇಟು ತಿಂದು  ಮೂರ್ನಾಕು ದಿನವಾಗಿ ರಕುತ ಸೋರಿ , ತಲೆಸುತ್ತು ಬಂದು ಅರೆಪ್ರಜ್ಞೆಗೋಗಿ ಸತ್ತಿತ್ತು ಆ ಹಂದಿ. ಸುಮಾರು 35-40 ಕೆಜಿ ಬಾಡನ್ನು ಹೊಂದಿದ್ದ ಆ ಹಂದಿ ಕಳೇಬರವನ್ನು ನಮ್ಮ ನಾಯಿ ಭಗೀರ ವಾಸನೆಯಿಂದಲೇ  ಕಂಡಿಡಿದು ಮೇಸ್ತ್ರಿಗೆ ಬೊಗಳಿ ವಿಷಯ ಮುಟ್ಟಿಸಿತ್ತು ನಮ್ಮ ತೋಟದಲ್ಲಿ ಸಾಯುವ ಸಕಲ ಪ್ರಾಣಿಗಳಿಗೂ ಅಂತ್ಯ ಸಂಸ್ಕಾರವುಂಟು.

ಮೇಸ್ತ್ರಿ ಗುರುಸಾಂತಪ್ಪನೂ  ಮಾಂಸದ ರೂಚಿ ಪಳಗಿದ್ದನಾದರೂ ಮೇಲಿನವರ ಅಪ್ಪಣೆಯಂತೆ ಕಾಟೇರಿದೊಡ್ಡಿಯ ಕೊರಮರನ್ನು ಕರೆಸಿ ತೋಟದಲ್ಲೇ ಗುಂಡಿ ತೋಡಿ ಮಣ್ಣೂ ಮಾಡಿಸಿದರು. ಮಣ್ಣು ಮಾಡಲು ಬಂದ ಕೊರಮರ ಚುಂಚನು ಇಲ್ಲಕ್ಕಿಲ್ಲದಾ ಬಹುವಿಧವಾಗಿ ಗುರುಸಾಂತಪ್ಪನಲ್ಲಿ ಬಿನ್ನಪಿಸಿ ಬೇಡಿ ಕೊಂಡನಾದರೂ "20-30 ಕೆಜಿ ಮಾಂಸವುಳ್ಳ ಘನವಾದ ಹಂದಿಯನ್ನು  ಅದರ ರುಚಿಯನ್ನು ಹೊಗಳಿ, ಇದನ್ನು ಮಣ್ಣುಮಾಡಲು ತಿಳಿಸಿದವರನ್ನು, ಮಣ್ಣು ಮಾಡಿಸುತ್ತಿರುವವರನ್ನೂ ತೆಗಳಿ ಮನಸಿಲ್ಲದೆ ಮನಸ್ಸಿನಿಂದ ಮಣ್ಣು ಮಾಡಿ ಕೂಲಿ ಪಡೆದು ಹೊಂಟೋದರು.  ಆದರೆ ಮರುದಿನ ಯಾರೋ! ಆ ಹೂತಿದ್ದ  ಹಂದಿಯನ್ನು ಅಬೇಸ್ ಮಾಡಿ ಬಿಟ್ಟಿದ್ದರು. ನೂರಾರು ಸಾರಿ ಹುಡುಕಿದರೂ ತೋಟಿತಿಮ್ಮನ ಕೈಲಿ ಸಾರಿಸಿ ಕೇಳಿದರೂ, ಕಣಿಯಣ್ಣನ ಜಕಣಿಯಲ್ಲೂ ಹಂದಿಯನ್ನು ಯಾರು ಕದ್ದರು ಎಂದು ಕೊನೆಗೂ ತಿಳಿಯಲಿಲ್ಲ . ಮೊನ್ನೆ ಸಿದ್ದೇಗೌಡ ಊರಿನ ಮನೆ ಮನೆಗಳಿಗೂ ಕದಾ ತಟ್ಟಿ ಆ ದುರ್ಗದ ದುರ್ಗಪ್ಪ ಫೋನ್ ಮಾಡಿದ್ದ ಹಂದಿ ಹೊಡೆದವನಂತೆ , ನಿಮಗೂನು  ಒಂದು ಗುಡ್ಡೆ ಮಾಂಸ ತರಲಾ. . .  ಎಂದು ಗಿರಾಕಿಗಳನ್ನು ಕುದುರಿಸುತ್ತಿದ್ದ.

ವೆಂಕಟ್ರಾಣನು ಕಟ್ಟಿದ್ದ ಉರುಳಿಗೆ ಹಂದಿ ಬದಲು ಕರಡಿ ಬಿದ್ದೋಗಿತ್ತಂತೆ  ! ಮತ್ತು ಮಾರನೇ ವಾರವೇ ಕಾಡಿಂದ ನಾಡಿಗೆ ಬಂದ ಚಿರತೆ, ರೋಡ್ ಸೈಡಲ್ಲಿ ಕೆಟ್ಟೋಗಿ ನಿಲ್ಲಿಸಿದ್ದ ಲಾರಿಯಲ್ಲಿ ಕಾವಲಾಗಿ ಮಲಗಿದ್ದ ಕ್ಲೀನರ್ ನನ್ನೇ ಕೊಂದು ಕ್ಲೀನಾಗಿ ತಿಂದು ಮುಗಿಸಿಬಿಟ್ಟಿದೆ ಇವುಗಳ ಕಾಟ ಅತಿಯಾಯ್ತು . ನರಭಕ್ಷಕ ಚಿರತೆಯನ್ನು ಹಿಡಿಯಿರಿ ಎಂದು ತಾಲ್ಲೂಕ್ ಆಫೀಸ್ ಮುಂದೆ ಕುಳಿತವರೆಲ್ಲರೂ ಕಾಡಂದಿಯ ರುಚಿಯುಂಡವರೇ ಇದ್ದುದ್ದು ಇನ್ನೊಂದು ಸೋಜಿಗ. ಯಾರನ್ನು ಶಿಕ್ಷಿಸುವುದು!.






# ವಿವಿ ಅಂಕಣ

### * *ರೋಸೆಟ್ಟಾ  ನೌಕೆ ಐತಿಹಾಸಿಕ ಸಾಧನೆ*

ಹತ್ತು ವರ್ಷಗಳ ಹಿಂದೆ ಭೂಮಿಯಿಂದ ನಭಕ್ಕೆ ಹಾರಿದ ಮಾನವ ನಿರ್ಮಿತ ರೋಸೆಟ್ಟಾ ಎಂಬ ನೌಕೆಯನ್ನು *ಧೂಮಕೇತು-67P* ನ ಮೇಲೆ ಯಶಸ್ವಿಯಾಗಿ ಇಳಿಸಿ ಯೂರೋಪಿನ ವಿಜ್ಞಾನಿಗಳು ಐತಿಹಾಸಿಕ ಸಾಧನೆ ಮಾಡಿದ್ದಾರೆ . *ಧೂಮಕೇತು-67P* ನ ವಾತಾವರಣದ ಬಗ್ಗೆ ಮಹತ್ವದ ಅಂಶಗಳನ್ನು ದಾಖಲಿಸಿ ಭೂಮಿಗೆ ರವಾನಿಸಿದೆ. ಧೂಮಕೇತುವಿನ ಮೇಲೆ ಕುಳಿತು ಸೂರ್ಯನ ಸುತ್ತಾ ಸುತ್ತಲು ತಯಾರಾಗಿದ್ದ ರೋಸೆಟ್ಟ ನೌಕೆಯಲ್ಲಿ ಕಾಣಿಸಿಕೊಂಡ ತಾಂತ್ರಿಕ ದೋಷ ದಿಂದಾಗಿ ಸಧ್ಯಕ್ಕೆ ತನ್ನ ಕಾರ್ಯವನ್ನು ಸ್ಥಗಿತಗೊಳಿಸಿದೆ. ನಾಲ್ಕು ಕಿ ಮೀ . ದೊಡ್ಡದಾದ ಧೂಮಕೇತುನ ಮೇಲೆ ಲ್ಯಾಂಡ್ ಆಗಬೇಕಾದಾಗ ಮೂರು ಬಾರಿ ಕುಪ್ಪಳಿಸದ್ದರಿಂದ *ರೋಸೆಟ್ಟಾ* ನೌಕೆಯ ಸೋಲಾರ್ ಪ್ಯಾನಲ್ ಜಖಂ ಆಗಿ , ಚಾರ್ಜ್ ಖಾಲಿಯಾಗಿ ನೌಕೆ ಸ್ಥಗಿತಗೊಂಡಿದೆ. ಆದರೂ ಯಾನ ಮುಂದುವರಿಸಿರುವ *ರೋಸೆಟ್ಟಾ* *ನೌಕೆ ಸೂರ್ಯನ* ಸುತ್ತ ಸುತ್ತಲಿದೆ. ಸೂರ್ಯನ ಹತ್ತಿರ ಹೋದಾಗ ಮತ್ತೆ *ರೋಸೆಟ್ಟಾ* ನೌಕೆ ಎಚ್ಚರವಾಗಬಹುದು ಎಂಬ ಆಶಾಭಾವನೆಯನ್ನು ವಿಜ್ಞಾನಿಗಳು ವ್ಯಕ್ತಪಡಿಸಿದ್ದಾರೆ. ಈ ಶತಮಾನದ ಮಹಾನ್ ಸಾಧನೆ ಎಂದು ಬಣ್ಣಿಸಿರುವ ಈ ನೌಕೆಯು ನಿದ್ದೆಗೆ ಜಾರುವ ಮುನ್ನ *ಧೂಮಕೇತು-67P* ನ ಸುಂದರ ಚಿತ್ರಗಳನ್ನು ತೆಗೆದು ಭೂಮಿಗೆ ಕಳಿಸಿದೆ.



# ರಂಗು

ಹೂವಿಗೆ ರಂಗನು

ನವಿಲಿನ ರಂಗನು

ಚಿಟ್ಟೆಯ ರಂಗನು

ಕೊಟ್ಟವರ್ಯಾರು?

ಬಾನಿಗೆ ರಂಗನು

ಮೇಘದ ರಂಗನು

ಕಾಮನಬಿಲ್ಲಿನ ರಂಗನು

ಕೊಟ್ಟವರ್ಯಾರು?

ರವಿ ರಂಗನು

ಶಶಿ ರಂಗನು

ಭೂಮಿಯ ರಂಗನು

ಕೊಟ್ಟವರ್ಯಾರು?

ಕೋಳಕ ರಂಗನು

ನದಿಗೆ ರಂಗನು

ಸಾಗರದ ರಂಗನು

ಕೊಟ್ಟವರ್ಯಾರು?

-ಕೃಷ್ಣನಾಯಕ್